3. ಬಾಬಾಬುಡನ್ ಗಿರಿ ಬೆಟ್ಟದಲ್ಲಿ ಶೌಚಾಲಯ ನಿರ್ಮಾಣ	15.17	13.20	1.97	13.20	1.97
4. ಚಿಕ್ಕಮಗಳೂರಿನಲ್ಲಿ ರಸ್ತೆಬದಿ ಸೌಲಭ್ಯ ನಿರ್ಮಾಣ	68.08	24.49	43.59	24.49	43.59
5. ಹೊರನಾಡು – ಕಳಸ ಬಳಿ ಶೌಚಾಲಯ ನಿರ್ಮಾಣ	8.86	8.00	0.86	8.00	0.86
6. ಶೃಂಗೇರಿಯಲ್ಲಿ ಯಾತ್ರಿ ನಿವಾಸ ನಿರ್ಮಾಣ	40.52	40.52	–	40.52	–
7. ಶೃಂಗೇರಿಯಲ್ಲಿ ಶೌಚಾಲಯ ನಿರ್ಮಾಣ	5.00	2.60	2.40	2.60	2.40

ಊ) ಈ ಪ್ರವಾಸಿ ತಾಣಗಳಿಗೆ ಪ್ರತಿದಿನ ಸುಮಾರು 5000 ದೇಶೀಯ ಪ್ರವಾಸಿಗರು ಹಾಗೂ ಸುಮಾರು 35–40 ಜನ ವಿದೇಶೀ ಪ್ರವಾಸಿಗರು ಭೇಟಿ ನೀಡುತ್ತಾರೆ.

ಊ) 1. ಬಾಬಾ ಬುಡನ್ ಗಿರಿ ಬೆಟ್ಟದಲ್ಲಿ ಶೌಚಾಲಯ ನಿರ್ಮಿಸಲಾಗಿದೆ.

2. ಚಿಕ್ಕಮಗಳೂರಿನಲ್ಲಿ ರಸ್ತೆಬದಿ ಸೌಲಭ್ಯ ನಿರ್ಮಿಸಲಾಗಿದೆ.

3. ಹೊರನಾಡು–ಕಳಸ ಬಳಿ ಶೌಚಾಲಯ ನಿರ್ಮಿಸಲಾಗಿದೆ.

4. ಶೃಂಗೇರಿಯಲ್ಲಿ ಯಾತ್ರಿ ನಿವಾಸ ನಿರ್ಮಿಸಲಾಗಿದೆ.

5. ಶೃಂಗೇರಿಯಲ್ಲಿ ಶೌಚಾಲಯ ನಿರ್ಮಿಸಲಾಗಿದೆ.

ಋ) ಪ್ರವಾಸೋದ್ಯಮ ಇಲಾಖೆಗೆ ದೂರು ಬಂದಿಲ್ಲ. ದೂರು ಬಂದ ಪಕ್ಷದಲ್ಲಿ ತೋಟಗಾರಿಕೆ ಇಲಾಖೆಗೆ ತಿಳಿಸಲಾಗುವುದು.

ಎ) ಪ್ರವಾಸೋದ್ಯಮ ಇಲಾಖೆಗೆ ದೂರು ಬಂದಿಲ್ಲ. ದೂರು ಬಂದ ಪಕ್ಷದಲ್ಲಿ ತೋಟಗಾರಿಕೆ ಇಲಾಖೆಗೆ ತಿಳಿಸಲಾಗುವುದು.

819(83) ಶ್ರೀ ಆರ್. ಸಿ.ಟಿ : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಭದ್ರಾ ಅಭಯಾರಣ್ಯ ಹಾಗೂ ರಾಜ್ಯದ ಇತರ ಅರಣ್ಯಗಳಲ್ಲಿ ಬೆಂಕಿ ಕಾಣಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬೆಂಕಿ ಅನಾಹುತಕ್ಕೆ ಕಾರಣಗಳೇನು;

ಇ) ಇದರಿಂದ ಉಂಟಾದ ನಷ್ಟದ ಪ್ರಮಾಣ ಎಷ್ಟು (ಸರ್ಕಾರಿ ಹಾಗೂ ಖಾಸಗಿ ಆಸ್ತಿ–ಪಾಸ್ತಿಗಳ ನಷ್ಟದ ವಿವರ ನೀಡುವುದು);

ಈ) ಇಂತಹ ಖಾಸಗಿಯವರ ಆಸ್ತಿ–ಪಾಸ್ತಿಗಳಿಗೆ ನಷ್ಟವಾಗಿರುವ ಪ್ರಕರಣಗಳಲ್ಲಿ ಅರ್ಹ ಫಲಾನುಭವಿಗಳಿಗೆ ಸೂಕ್ತ ಪರಿಹಾರವನ್ನು ಸರ್ಕಾರ ನೀಡಿದೆಯೇ;

ಉ) ಇದಕ್ಕಾಗಿ ಸರ್ಕಾರ ಎಷ್ಟು ಮೊತ್ತವನ್ನು ಪರಿಹಾರವಾಗಿ ಬಿಡುಗಡೆ ಮಾಡಿದೆ;

ಊ) ಅದರಲ್ಲಿ, ಹಂಚಿಕೆ ಮಾಡಿರುವ ಪರಿಹಾರ ಮೊತ್ತ ಎಷ್ಟು (ವಿವರ ನೀಡುವುದು)?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು): ಅ) 2003–04ನೇ ಸಾಲಿನಲ್ಲಿ ಚಿಕ್ಕಮಗಳೂರು ವೃತ್ತದ ಭದ್ರಾ ಅಭಯಾರಣ್ಯ ಪ್ರದೇಶದ ಹಾಗೂ ಚಿಕ್ಕಮಗಳೂರು ವಿಭಾಗದ ಮುತ್ತೋಡಿ ವಲಯದಲ್ಲಿ ಬೆಂಕಿ ಕಾಣಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಭದ್ರಾ ಅಭಯಾರಣ್ಯ ಪ್ರದೇಶಕ್ಕೆ ಸಂಬಂಧಪಟ್ಟಂತೆ, ವ್ಯಾಪಕವಾಗಿ ಬೊಂಬುಗಳಿಂದ ಕೂಡಿರುವ ಪ್ರದೇಶಗಳಿದ್ದು 1998ನೇ ಸಾಲಿನಿಂದಲೂ ಹೂ ಬಿಡಲು ಪ್ರಾರಂಭಿಸಿ 2001ನೇ ಸಾಲಿಗೆ ಸಂಪೂರ್ಣವಾಗಿ ಹೂ ಬಿಟ್ಟು ಒಣಗಿ ಬೊಂಬು ಹಿಂಡಲು ಸತ್ತು ನಿಂತಿರುತ್ತದೆ. ಈ ರೀತಿ ಒಣಗಿ ಸತ್ತು ಸತ್ತು ನಿಂತ ಬೊಂಬುಗಳು ಬೆಂಕಿ ಉರಿಯಲು ಉತ್ತೇಜನಕಾರಿಯಾಗಿರುತ್ತದೆ. (Combustible Materials) ಅಲ್ಲದೇ 2000ನೇ ಸಾಲಿನಿಂದ 2003ನೇ ಸಾಲಿನವರೆಗೂ ಸಾಕಷ್ಟು ಪ್ರಮಾಣದ ಮಳೆಯಾಗದೇ ಇರುವುದರಿಂದ ಹಳ್ಳಕೊಳ್ಳ, ಕೆರೆಗಳಲ್ಲಿ ನೀರು ಬತ್ತಿಹೋಗಿ ವಾತಾವರಣದ ಉಷ್ಣಾಂಶವು ಅಧಿಕವಾಗಿದ್ದು ಶುಷ್ಕ ವಾತಾವರಣ ಉಂಟಾಗಿರುತ್ತದೆ. ಈ ಮೇಲಿನ ಅಂಶಗಳು ಬೆಂಕಿ ಉಂಟಾಗಲು ಮುಖ್ಯ ಕಾರಣಗಳಾಗಿರುತ್ತದೆ. ಐ.ಎ.548 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ತಡೆಯಾಜ್ಞೆಯಂತೆ ರಾಜ್ಯದ ರಾಷ್ಟ್ರೀಯ ಉದ್ಯಾನವನ ಹಾಗೂ ಅಭಯಾರಣ್ಯದಿಂದ ಯಾವುದೇ ಅರಣ್ಯ ಉತ್ಪನ್ನವನ್ನು ತೆಗೆಯಲು ಅವಕಾಶವಿರುವುದಿಲ್ಲ. ಇತರೆ ಅರಣ್ಯಗಳಿಗೆ ಸಂಬಂಧಪಟ್ಟಂತೆ ನೆಲಮಟ್ಟದ ಬೆಂಕಿಮಾತ್ರ ಕಂಡುಬಂದಿರುತ್ತದೆ ಕಾರಣ ಮರಗಳಿಂದ ಉದುರಿದ ಎಲೆ ಹಾಗೂ ಆನೆಹುಲ್ಲು ಒಣಗಿರುವುದು ಬೆಂಕಿ ಅನಾಹುತಕ್ಕೆ ಮುಖ್ಯ ಅಂಶಗಳಾಗಿರುತ್ತದೆ.

ಇ) ಅರಣ್ಯ ಪ್ರದೇಶಕ್ಕೆ ಬೆಂಕಿ ಬಿದ್ದ ಕಾರಣದಿಂದ ಉಂಟಾದ ನಷ್ಟ ಈ ಕೆಳಕಂಡಂತಿರುತ್ತದೆ.

1.	ಭದ್ರಾ ವನ್ಯಜೀವಿ ವಿಭಾಗ	–	ರೂ. 11,61,200/–
2.	ಚಿಕ್ಕಮಗಳೂರು ವಿಭಾಗ	–	ರೂ. 13,28,205/–
3.	ಕೊಪ್ಪ ವಿಭಾಗ	–	ರೂ.ನೆಲಮಟ್ಟ ಬೆಂಕಿಯಾದ್ದರಿಂದ ಯಾವುದೇ ನಷ್ಟ ಉಂಟಾಗಿರುವುದಿಲ್ಲ.

ಖಾಸಗಿ ಆಸ್ತಿ–ಪಾಸ್ತಿಗಳ ನಷ್ಟದ ವಿವರ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ.

ಈ) ಖಾಸಗಿಯವರ ಆಸ್ತಿಪಾಸ್ತಿಗೆ ನಷ್ಟವಾಗಿರುವ ಪ್ರಕರಣಗಳಲ್ಲಿ ಫಲಾನುಭವಿಗಳಿಗೆ ಪರಿಹಾರ ನೀಡುವ ಕ್ರಮವು ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಉ) ಅನ್ವಯಿಸುವುದಿಲ್ಲ.

ಊ) ಅನ್ವಯಿಸುವುದಿಲ್ಲ.